CC-O. In Public Domain. Digitized by eGangotri

ಪುಸ್ತಕೋದ್ಯಮ

ಆನಂದ ಎಂಟನೆಯ ತರಗತಿಯ ವಿದ್ಯಾರ್ಥಿ. ಪ್ರಾಥಮಿಕ ಶಾಲೆಯಲ್ಲಿ ಓದಿ ಅದೇ ತಾನೇ ಪ್ರೌಢಶಾಲೆಗೆ ಸೇರಿದ್ದ. ರಾಮಣ್ಣ ಆನಂದನ ತಂದೆ. ಇದುವರೆಗೂ ಅವರೇ ಮಗನಿಗಾಗಿ ಪುಸ್ತಕಗಳನ್ನು ಕೊಂಡು ತರುತ್ತಿದ್ದರು.

ಈ ಸಲ ಆನಂದನಿಗೆ ಅವನ ತಂದೆ ಹೇಳಿದರು. 'ಹಣ ಕೊಡುತ್ತೇನೆ. ನಿನ್ನ ಶಾಲೆಯ ಪುಸ್ತಕಗಳನ್ನು ಹಾಗೂ ಇತರ ಪುಸ್ತಕಗಳನ್ನು ಇನ್ನು ಮುಂದೆ ನೀನೇ ಕೊಂಡುಕೊ.'

ಆನಂದ ಮೊದಲು ಸ್ವಲ್ಪ ಹೊತ್ತು ಯೋಚಿಸಿದ. ಅನಂತರ 'ಸರಿ, ನಾನೇ ಕೊಳ್ಳುವೆ' ಎಂದ. ತನ್ನ ಕಾಲ ಮೇಲೆ ತಾನು ನಿಲ್ಲುವುದು ಎಂದಿಗೂ ಒಳ್ಳೆಯದೇ !

ಆನಂದ ಪುಸ್ತಕದ ಅಂಗಡಿಯತ್ತ ಹೊರಟ. ತಾನಿದ್ದ ರಸ್ತೆಯಲ್ಲಿ ಕೆಲವು ಸಣ್ಣ ಪುಟ್ಟ ಅಂಗಡಿಗಳಿದ್ದವು. ಆದರೆ ಅಲ್ಲಿ ತನಗೆ ಬೇಕಾದ ಎಲ್ಲ ಪುಸ್ತಕಗಳೂ ಅವನಿಗೆ ಸಿಗಲಿಲ್ಲ.

ಅನಂತರ ಅವನು ನಗರದ ದೊಡ್ಡ ಪುಸ್ತಕದಂಗಡಿಗೆ ಹೋದ. ಅದನ್ನು ನೋಡಿದಾಗ, ಅವನಿಗೆ ಒಂದು ಬಗೆಯ ಆಶ್ಚರ್ಯ ಉಂಟಾಯಿತು. ಯಾವುದೋ ಬೇರೊಂದು ಜಗತ್ತಿಗೆ ಬಂದ ಹಾಗಾಯಿತು. ಅಂಗಡಿಯಲ್ಲಿ ಯಾವ ಕಡೆ ನೋಡಿದರೂ ಪುಸ್ತಕಗಳೇ. ಬಹು ನಾಜೂಕಾಗಿ ಜೋಡಿಸಿಟ್ಟ ಪುಸ್ತಕಗಳ ಸಾಲು

Sri Vidyabharathi Book Centre, Sringeri

CC-O. In Public Domain. Digitized by eGangotri
ಬಣ್ಣ ಬಣ್ಣದ ಆಕರ್ಷಕ ಪುಸ್ತಕಗಳು. ಎಂಥ ಮನಸೆಳೆವ ಸುಂದರ ಹೊತ್ತಿಗೆಗಳು! ಪುಟಾಣಿ ಗಾತ್ರದಿಂದ ಹಿಡಿದು ಬಹಳಷ್ಟು ದೊಡ್ಡ ಗಾತ್ರದ ಪುಸ್ತಕಗಳು ಅಲ್ಲಿದ್ದವು. ಅವಕ್ಕೇ ನಾದರೂ ಬಾಯಿ ಇದ್ದಿದ್ದರೆ ಅವೆಷ್ಟು ಇಂಪಾಗಿ ಹಾಡುತ್ತಿದ್ದವೊ! ಆನಂದ ಮನಸ್ಸಿನಲ್ಲೇ ಊಹಿಸಿಕೊಂಡ.

ಈ ಪುಸ್ತಕ ರಾಶಿಯನ್ನು ನೋಡುತ್ತ ಆನಂದ ಅಂಗಡಿಯಲ್ಲಿ ಮೂಕನಾಗಿ ನಿಂತುಕೊಂಡ. ಸಂತೋಷ, ಸಂಭ್ರಮ ಒಂದು ಕಡೆ; ದಿಗ್ಭ್ರಮೆ ಇನ್ನೊಂದು ಕಡೆ. ಈ ಮುಂಚೆ ನಾನೇ ಪುಸ್ತಕದಂಗಡಿಗೆ ಬಂದು ಪುಸ್ತಕಗಳನ್ನು ನೋಡಿ, ಕೊಂಡಿದ್ದರೆ ಚೆನ್ನಾಗಿತ್ತು ಎಂದುಕೊಂಡ.

ಒಂದೆಡೆ ಪುಟ್ಟ ಮಕ್ಕಳಿಗಾಗಿ ಕಾಮಿಕ್ಸ್‌ಗಳು, ಬಾಲ ಬೋಧೆಗಳು, ಸಾಹಸ ಕತೆಗಳು, ನೋಡಿ ಕಲಿಯಿರಿ ಮಾಲೆಯ ಕೃತಿಗಳು ಇತ್ಯಾದಿ. ಇನ್ನೊಂದೆಡೆ ಆಕಾಶಯಾನ, ಸಸ್ಯಜಗತ್ತು, ಪ್ರಾಣಿ ಜಗತ್ತನ್ನು ಕುರಿತ ಪುಸ್ತಕಗಳು. ಶಾಲಾ ಮಕ್ಕಳ ಪಠ್ಯ ಪುಸ್ತಕಗಳು ಒಂದು ಬದಿಯಲ್ಲಿ. ವಿವಿಧ ವಿಷಯಗಳನ್ನು ಕುರಿತ ಕಾಲೇಜು ಪುಸ್ತಕಗಳು ಇನ್ನೊಂದು ಬದಿಯಲ್ಲಿ. ಕತೆ, ಕಾದಂಬರಿ, ಜೀವನ ಚರಿತ್ರೆಗಳು, ವಿಶ್ವಕೋಶಗಳು, ನಿಘಂಟುಗಳು— ಹೀಗೆ ಅವೆಷ್ಟು ಪ್ರಕಾರದವು! ಕಾನೂನು, ಶಿಕ್ಷಣ, ಎಂಜಿನಿಯರಿಂಗ್, ವೈದ್ಯಕೀಯ ಮುಂತಾದ ಅನೇಕ ವಿಷಯಗಳನ್ನು ಕುರಿತಂತೆ ಸಾವಿರಾರು ಪುಸ್ತಕಗಳ ಪ್ರಪಂಚವೇ ಅಲ್ಲಿತ್ತು.

ಇವುಗಳಲ್ಲದೆ ಅನೇಕ ವಾರಪತ್ರಿಕೆಗಳು, ಮಾಸಿಕಗಳು, ತ್ರೈಮಾಸಿಕಗಳು ಬೇರೆ. ಈ ಪುಸ್ತಕಗಳು ಹಾಗೂ ಪತ್ರಿಕೆಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಭಾಷೆಗೇ ಸೀಮಿತವಾಗಿರದೆ, ಹಲವಾರು ಭಾಷೆಗಳಲ್ಲಿದ್ದವು.

ಪುಸ್ತಕಗಳ ಬೆಲೆಯತ್ತ ಕಣ್ಣು ಹಾಯಿಸಿದ- ೨೫ ಪೈಸೆಯಿಂದ ಹಿಡಿದು ೩೦೦ ರೂಪಾಯಿಗಳು!

ಈ ವರ್ಣಮಯ ಲೋಕದಲ್ಲಿ ಪುಸ್ತಕಗಳನ್ನು ನೋಡುತ್ತಾ ನಿಂತ ಆನಂದನಿಗೆ ಸಮಯ ಕಳೆದದ್ದೇ ತಿಳಿಯಲಿಲ್ಲ. ರಂಜಿಸುವ ಆ ಪುಸ್ತಕಗಳನ್ನು ಕಣ್ತುಂಬ ನೋಡಿದ; ಮನಸಾರೆ ಆಶಿಸಿದ. ಉತ್ತಮ ಪುಸ್ತಕ ಎಂದೂ ವ್ಯಕ್ತಿಯ ಸ್ನೇಹಿತ ತಾನೆ!

ತನಗೆ ಆವಶ್ಯಕವಾದ ಪುಸ್ತಕಗಳನ್ನು ಗುರುತಿಸಿದ. ಆಮೇಲೆ ಅಲ್ಲಿಂದ ಮಾರಾಟ ಸಹಾಯಕನ ಬಳಿ ಹೋದ. ಆಯ್ಕೆ ಮಾಡಿದ ಪುಸ್ತಕಗಳತ್ತ ಬೆರಳು ತೋರಿ ಅವನ್ನು ಕೊಡುವಂತೆ ಕೇಳಿದ.

"ಕೊಂಡ ಪುಸ್ತಕಗಳ ಮೇಲೆ ರಿಯಾಯಿತಿ ಕೊಡುತ್ತಾರೆ ಎಂದು ನಮ್ಮ ತಂದೆ ಹೇಳುತ್ತಿದ್ದರು. ನೀವೇನಾದರೂ ರಿಯಾಯಿತಿ ತೋರಿಸುತ್ತೀರೇನು?" ಎಂದ ಆನಂದ.

"ಹೆಚ್ಚು ಸಂಖ್ಯೆಯಲ್ಲಿ ಖರೀದಿ ಮಾಡುವವರಿಗೆ ಮಾತ್ರ ರಿಯಾಯಿತಿ ಕೊಡುತ್ತೇವೆ. ನೀನು ನಿಜ ಪುಸ್ತಕ ಪ್ರೇಮಿಯಂತೆ ಕಾಣುತ್ತೀ. ನೀನು ಕೇಳುತ್ತಿರುವುದರಿಂದ ವಿಶೇಷವಾಗಿ ಶೇಕಡ ೧೦ರಷ್ಟು ರಿಯಾಯಿತಿ ಕೊಡುತ್ತೇವೆ" ಎಂದು ಹೇಳಿದ ಮಾರಾಟ ಸಹಾಯಕ.

"ನೀವೇ ಈ ಎಲ್ಲ ಪುಸ್ತಕಗಳನ್ನು ತಯಾರಿಸುತ್ತೀರೇನು?" ಆನಂದನ ಇನ್ನೊಂದು ಪ್ರಶ್ನೆ.

CC-O. In Public Domain. Digitized by eGangotri



"ಇಲ್ಲ. ಬೇರೆ ಬೇರೆ ಪ್ರಕಾಶಕರಿದ್ದಾರೆ, ಭಾರತ ಹಾಗೂ ಇತರ ದೇಶಗಳಲ್ಲಿ. ಅವರಿಂದ ನಾವು ಪುಸ್ತಕಗಳನ್ನು ಕೊಂಡು ಕೊಳ್ಳುತ್ತೇವೆ."

"ನಿಮಗೆಷ್ಟು ರಿಯಾಯಿತಿ ಕೊಡುತ್ತಾರೆ ಪ್ರಕಾಶಕರು ಎಂದು ಕೇಳಬಹುದಾ?" ಎಂದು ಅಳಕುತ್ತಾ ಕೇಳಿದ ಆನಂದ.

"ನಿನಗೆ ತಿಳಿದುಕೊಳ್ಳುವ ಉತ್ಸಾಹವಿದೆ. ಅದಕ್ಕಾಗಿ ಹೇಳುವೆ. ಎಲ್ಲ ಪುಸ್ತಕಗಳಿಗೂ ಇಷ್ಟೇ ಎಂದು ನಿಗದಿಯಲ್ಲ. ಸುಮಾರು ೫ ರಿಂದ ೫೦ರಷ್ಟು ರಿಯಾಯಿತು ಸಿಗುತ್ತದೆ. ಇವೆಲ್ಲ ಮಾರಾಟದ ಮೇಲೆ ಸಿಗುವ ಲಾಭದ ಪ್ರಶ್ನೆ" ಎಂದ ಮಾರಾಟ ಸಹಾಯಕ. ಆನಂದನ ಕುತೂಹಲವನ್ನು ತಣಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಣ ಪಾವತಿ ಮಾಡಿ ಆನಂದ ಪುಸ್ತಕ ಪ್ಯಾಕೆಟ್ ತೆಗೆದು ಕೊಂಡು ಮನೆಗೆ ಹೊರಟ. ಅವನ ಮುಖದಲ್ಲಿ ಆನಂದವಿತ್ತು, ವಿಜಯೋತ್ಸಾಹವಿತ್ತು.

ರಾಮಣ್ಣನವರು ಕಾಲೇಜಿನ ಅಧ್ಯಾಪಕರು. ಪುಸ್ತಕ ಪ್ರೇಮಿಗಳು. ತಮ್ಮಂತೆ ಮಗ ಆನಂದನೂ ಓದುವ ಹವ್ಯಾಸ ಬೆಳಸಿಕೊಳ್ಳಲಿ ಎಂಬ ಆಸೆ ಅವರಿಗೆ.

ಪುಸ್ತಕದ ಪ್ಯಾಕೆಟ್ ಹಿಡಿದು ಮನೆಗೆ ಬಂದ ಮಗನನ್ನು ನೋಡಿ, ರಾಮಣ್ಣನವರು "ಆನಂದ, ಏನು ತುಂಬ ಸಂತೋಷ ದಿಂದ ಇದ್ದೀಯಲ್ಲಾ ?" ಎಂದು ಕೇಳಿದರು.

"ಹೌದು ಅಣ್ಣಾ, ನಾನು ಪುಸ್ತಕದಂಗಡಿಗೆ ಹೋದದ್ದು ಒಳ್ಳೆಯದಾಯಿತು. ಎಂತಹ ಸೊಗಸಾದ ಪುಸ್ತಕಗಳು! ಅವನ್ನು ಕಂಡು ನಾ ಹಿಗ್ಗಿ ಹೀರೇಕಾಯಿಯಾಗಿ ಹೋದೆ. ಇನ್ನು ಮುಂದೆ ವಾರಕ್ಕೊಂದು ಸಲ ಪುಸ್ತಕದ ಅಂಗಡಿಗೆ ಹೋಗುವೆ. ನೀನು ದುಡ್ಡು ಕೊಡುತ್ತಿರಬೇಕು ಅಷ್ಟೆ" ಎಂದ ಆನಂದ. "ಆಮೇಲೆ ಇನ್ನೊಂದು ಸಂಗತಿ. ನೀನು ಕೊಟ್ಟ ಹಣದಲ್ಲೇ ಉಳಿತಾಯ ಮಾಡಿದ್ದೇನೆ. ರಿಯಾಯಿತಿ ಬೇರೆ ಗಿಟ್ಟಿಸಿದ್ದೇನೆ. ಮುಂದಿನ ಸಲ ಈ ಹಣದಿಂದಲೂ ಪುಸ್ತಕ ಕೊಳ್ಳುವೆ." ಅವನ ಮಾತಿನಲ್ಲಿ ಹೆಮ್ಮೆಯಿತ್ತು; ರಾಮಣ್ಣ ಸಂತೋಷಪಟ್ಟರು.

ರಾತ್ರಿ ಊಟಕ್ಕೆ ಕುಳಿತಾಗ, "ಆನಂದ, ಇಂದು ನಿನಗೆ ಬೇಕಾದ ಪುಸ್ತಕಗಳನ್ನು ಕೊಳ್ಳುವ ಸೌಲಭ್ಯವಿದೆ. ಆದರೆ ಹಿಂದೆ ಹಾಗಿರಲಿಲ್ಲ. ಮುದ್ರಣ ಕಾಗದವಾಗಲಿ, ಮುದ್ರಣ ಕಲೆಯಾಗಲಿ ಅಭಿವೃದ್ಧಿಯಾಗಿರಲಿಲ್ಲ. ಆಗ ಏನು ಮಾಡುತ್ತಿದ್ದರು ಗೊತ್ತಾ ? ರಾಜ ಮಹಾರಾಜರಿಂದ ಆಶ್ರಯ ಪಡೆದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಿಗಳು ತಾಳೆಗರಿಯಲ್ಲಿ ತಮ್ಮ ಕಾವ್ಯಗಳನ್ನು ಬರೆಯುತ್ತಿದ್ದರು. ಅವನ್ನು ಆಸ್ಥಾನಗಳಲ್ಲಿ ಓದಿ ಮನ್ನಣೆ ಗಳಿಸುತ್ತಿದ್ದರು. ಇವರಿಂದ ಸಾಮಾನ್ಯ ಜನರಿಗೆ ಕವಿಗಳ ರಚನೆಯನ್ನು ಕೇಳುವ, ಓದುವ ಅವಕಾಶವಿರಲಿಲ್ಲ; ಆ ಸಂತೋಷವೂ ಸಿಗುವಂತಿರಲಿಲ್ಲ.

ಅಂತಹ ಕಾಲದಲ್ಲಿ ಚಾಲುಕ್ಯರಾಜನ ಸೇನಾಪತಿಯ ಮಡದಿ ಅತ್ತಿಮಬ್ಬೆ ಒಂದು ಮಹತ್ಕಾರ್ಯ ಮಾಡಿದಳು. ರಾಷ್ಟ್ರಕೂಟರ ಆಶ್ರಯದಲ್ಲಿದ್ದ ಕವಿರತ್ನ ಪೊನ್ನನ 'ಶಾಂತಿ ಪುರಾಣ' ಕೃತಿಯ ೧೦೦೦ ಪ್ರತಿಗಳನ್ನು ಬರೆಸಿ ಹಂಚಿದ ಕೀರ್ತಿ ಅವಳದು. ಅಂದರೆ ಮುದ್ರಣ ಸೌಕರ್ಯವೇ ಇಲ್ಲದ ಆ ಸಮಯದಲ್ಲಿ ಈ ಕಾರ್ಯ ಬಹಳ ದೊಡ್ಡದು. ಅಕ್ಷರ ಪ್ರಸಾರಕಾರ್ಯಕ್ಕಿಂತ ಮಿಗಿಲಾದ ಸೇವೆ ಇನ್ನೊಂದಿಲ್ಲ." ಎಂದರು ರಾಮಣ್ಣ.

"ಅಣ್ಣಾ, ಹಾಗಾದ್ರೆ ಪುಸ್ತಕಗಳ ಮುದ್ರಣಕಾರ್ಯ ಯಾವಾಗ ಪ್ರಾರಂಭವಾಯಿತು?" ಎಂದು ಕೇಳಿದ ಆನಂದ.

"ಜೋಹಾನ್ಸ್ ಗುಟೆನ್‌ಬರ್ಗ್ ಎಂಬಾತ ೧೪೫೯ರಲ್ಲಿ ಮೊದಲ ಬಾರಿಗೆ ಅಚ್ಚಿನ ಮೊಳೆಗಳನ್ನು ಕಂಡುಹಿಡಿದ. ಆತ ವೃತ್ತಿಯಲ್ಲಿ ಆಕ್ಕಸಾಲಿಗ. ಜರ್ಮನಿ ದೇಶದವ. ಸುಮಾರು ೧೪೫೦ರ ಹೊತ್ತಿಗೆ ಸುಪ್ರಸಿದ್ಧ ಬೈಬಲ್ ಅನ್ನು ಪ್ರಕಟಿಸಿದ. ಅಮೇಲೆ ಜಗತ್ತಿನ ಇತರ ದೇಶಗಳಿಗೂ ಮುದ್ರಣ ಕಲೆ ಹರಡಿತು.

ಭಾರತದಲ್ಲಿ ಮೊದಲು ಮುದ್ರಣವನ್ನು ಪ್ರಾರಂಭಿಸಿದವರು ಪೋರ್ಚುಗೀಸರು. ಕ್ರೈಸ್ತಮತದವರು ತಮ್ಮ ಮತ ಪ್ರಚಾರಕ್ಕಾಗಿ ಮುದ್ರಣವನ್ನು ಕೈಗೆತ್ತಿಕೊಂಡರು ನಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇಶದಲ್ಲಿ. ಆದರೆ ಈ ಕಾರ್ಯ ಅನಂತರ ನಮ್ಮ ಪ್ರಗತಿಗೆ ತುಂಬ ನೆರವಾಯಿತು."

ಊಟ ಮುಗಿಯಿತು. ಆನಂದ ಪ್ರಶ್ನೆ ಕೇಳುತ್ತಲೇ ಇದ್ದ. ಪುಸ್ತಕ ಹೇಗೆ ರಚಿತವಾಗುತ್ತದೆ? ಅದನ್ನು ಹೇಗೆ ಮುದ್ರಿಸುತ್ತಾರೆ? ಮಾರಾಟದ ಬಗೆ ಹೇಗೆ? ಒಂದಲ್ಲ, ನೂರಾರು ಪ್ರಶ್ನೆಗಳ ಸರಮಾಲೆ.

ರಾಮಣ್ಣನವರು ಹೇಳಿದರು: "ಆನಂದ. ಈಗ ಮಲಗುವ ಹೊತ್ತಾಯಿತು. ನಾಳೆ ವಾಸು ಮಾಮ-ಬರುತ್ತಾರಲ್ಲ, ಅವರನ್ನು ಕೇಳುವೆಯಂತೆ. ಈಗ ನಿದ್ದೆ ಮಾಡಲು ಹೋಗು."

ಬೆಳಗಾಯಿತು. ಆನಂದ ಮಾಮನ ಆಗಮನದ ನಿರೀಕ್ಷೆಯಲ್ಲೇ ಇದ್ದ. ಸಾಯಂಕಾಲವಾಯಿತು. ವಾಸು ಮಾಮ ಮನೆಗೆ ಬಂದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದ ಮಾಮನ ಜೋತುಬಿದ್ದ. ನಿನ್ನೆ ಪುಸ್ತಕದ ಅಂಗಡಿಗೆ ಭೇಟಿಕೊಟ್ಟ ವಿಷಯ ತಿಳಿಸಿದ. "ಮಾಮ, ವರ್ಷದಲ್ಲಿ ಎಷ್ಟು ಪುಸ್ತಕಗಳು ಬರುತ್ತವೆ?" ಎಂದು ಕೇಳಿದ.

ವಾಸು ಅವರು ಮುದ್ರಣ, ಪ್ರಕಾಶನ ಕ್ಷೇತ್ರದಲ್ಲಿ ಅಪಾರ ಅನುಭವ ಗಳಿಸಿದವರು. ಈ ದಿಶೆಯಲ್ಲಿ ಹೆಸರಾಂತ ವ್ಯಕ್ತಿ ಅವರು. ಅವರೆಂದರು: "ಆನಂದ, ಪ್ರಪಂಚದಲ್ಲಿ ಪ್ರತಿ ವರ್ಷ ಸುಮಾರು ೫ ಲಕ್ಷ ಪುಸ್ತಕಗಳು ಪ್ರಕಟವಾಗುತ್ತವೆ. ಅಂದರೆ ಪ್ರತಿ ನಿಮಿಷಕ್ಕೊಂದು ಪುಸ್ತಕ ಹೊರಬಂದತಾಯಿತು ಅಲ್ಲವಾ?"

"ಈ ಪುಸ್ತಕಗಳ ಎಷ್ಟು ಪ್ರತಿಗಳು ಮುದ್ರಿತವಾಗುತ್ತವೆ, ಹೇಳುತ್ತೀಯಾ?" ಆನಂದನ ಪ್ರಶ್ನೆಗಳ ಬತ್ತಳಿಕೆ ಎಂದೂ ಬತ್ತದಂತಹದು.

"ಪ್ರತಿ ವರ್ಷ ೭,೦೦೦ ದಿಂದ ೮,೦೦೦ ದಶಲಕ್ಷ ಪ್ರತಿಗಳು ಮುದ್ರಿತವಾಗುತ್ತವೆ. ವಿಶ್ವದ ಪುಸ್ತಕದಲ್ಲಿ ೮೦ ರಷ್ಟು ಪಾಲು ಪುಸ್ತಕಗಳು ಯೂರೋಪ್, ಜಪಾನ್, ರಷ್ಯಾ ಮತ್ತು ಅಮೆರಿಕಾಗಳಲ್ಲಿ ಪ್ರಕಟವಾಗುತ್ತವೆ. ನಿನಗೆ ಆಶ್ಚರ್ಯವಾಗಬಹುದು, ಆನಂದ್. ಕಳೆದ ೨೦ ವರ್ಷಗಳಲ್ಲಿ ಪುಸ್ತಕಗಳ ಈ ಸಂಖ್ಯೆ ಎರಡರಷ್ಟಾಗಿದ್ದರೆ. ಅವುಗಳ ಪ್ರತಿಗಳ ಸಂಖ್ಯೆ ಮೂರರಷ್ಟಾಗಿದೆ." ವಾಸು ವಿವರಿಸುತ್ತಾ ಹೋದರು.

"ಪುಸ್ತಕ ಹೇಗೆ ತಯಾರಾಗುತ್ತೆ ಹೇಳು, ವಾಸು ಮಾಮ"

"ಪುಸ್ತಕಾನ ಎಲ್ಲರೂ ಬರೆಯೋಕೆ ಆಗೋಲ್ಲ. ಅದೊಂದು ವಿಶಿಷ್ಟ ಕಲೆ. ಅದಕ್ಕೆ ಪ್ರತಿಭೆ ಬೇಕು. ಸಾಕಷ್ಟು ಲೋಕಾನುಭವ, ಪರಿಶ್ರಮ, ಪಾಂಡಿತ್ಯ, ಬೆಳಗಿನ ಕಲೆ, ಕವಿತೆ ಬರೆಯುವವರ ಕಲ್ಪನಾಶಕ್ತಿ ಅಸಾಮಾನ್ಯವಾಗಿರುತ್ತದೆ. ತಾವು

Sri Vidyabharathi Book Centre, Sringeri

CC-O. In Public Domain. Digitized by eGangotri



CC-O. In Public Domain. Digitized by eGangotri

ಅನುಭವಿಸಿದ್ದನ್ನು ಪರರೊಡನೆ ಹಂಚಿಕೊಳ್ಳುತ್ತಾರೆ ಲೇಖಕರು. ಬರವಣಿಗೆಯ ಮೂಲಕ ತಮ್ಮ ಅಭಿವ್ಯಕ್ತಿಗೊಂದು ಸಾಕಾರ



ರೂಪ ಕೊಡುತ್ತಾರೆ. ಈ ರೀತಿ ಹಸ್ತಪ್ರತಿ ತಯಾರಾಗುತ್ತದೆ."

"ಆಮೇಲೆ ಏನಾಗುತ್ತೆ?" ಮಧ್ಯೆ ಬಾಯಿ ಹಾಕಿದ ಆನಂದ.

"ಹೆಸರಾಂತ ಲೇಖಕರ ಹಸ್ತಪ್ರತಿಯನ್ನು ಪ್ರಕಟಿಸಲು ಪ್ರಕಾಶಕರು ಮುಂದೆ ಬರುತ್ತಾರೆ. ಹೊಸ ಲೇಖಕರಾದರೆ ಕೊಂಚ ಕಷ್ಟ. ಅಷ್ಟು ಸುಲಭವಾಗಿ ಅವನ್ನು ಪ್ರಕಾಶಕರು ಒಪ್ಪಿಕೊಳ್ಳುವುದಿಲ್ಲ. ಉತ್ತಮ ಪುಸ್ತಕಗಳನ್ನು ಪ್ರಕಟಿಸುವುದು, ಮಾರಾಟ ವ್ಯವಸ್ಥೆ ಮಾಡುವುದು ಪ್ರಕಾಶನ ಕಾರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಹಸ್ತಪ್ರತಿಯನ್ನು ಪ್ರಕಟಿಸಲು ಕೈಗೆತ್ತಿಕೊಂಡ ಮೇಲೆ ಅದನ್ನು ಪ್ರಕಾಶನಾಲಯದ ಸಂಪಾದಕರು ಒಮ್ಮೆ ಪರಿಶೀಲಿಸುತ್ತಾರೆ. ಭಾಷೆ, ಶೈಲಿ ದೃಷ್ಟಿಯಿಂದ ಹಸ್ತಪ್ರತಿಯನ್ನು ಓದುತ್ತಾರೆ. ಅಗತ್ಯವಾದರೆ ಅಲ್ಲಲ್ಲಿ ತಿದ್ದುಪಡಿ ಮಾಡುತ್ತಾರೆ. ಏನಾದರೂ ಸಂದೇಹ ಬಂದರೆ ಲೇಖಕರೊಡನೆ ಸಮಾಲೋಚಿಸುತ್ತಾರೆ. ಎಲ್ಲ ಪ್ರಕಾಶಕರ ಬಳಿ ಸಂಪಾದಕರು ಇರುವುದಿಲ್ಲ. ಕೆಲವು ಮಂದಿ ಪ್ರಕಾಶಕರು ವರ್ಷಕ್ಕೆ ಒಂದೆರಡು ಪುಸ್ತಕಗಳನ್ನು ಹೊರತಂದರೆ, ಇನ್ನು ಹಲವು ದೊಡ್ಡ ಪ್ರಕಾಶಕರು ಸಾವಿರಾರು ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಈ ಉದ್ಯಮದಲ್ಲಿ ತೊಡಗಿರುವ ಹಣ ಕೋಟಿ ಕೋಟಿ ರೂಪಾಯಿಗಳು."

ಅಬ್ಬಾ, ಅಷ್ಟೊಂದು ಹಣ ಬೇಕಾ ಈ ಪುಸ್ತಕಗಳನ್ನು ತರೋಕೆ ? ಸರಿ, ಈಗ ಹೇಳು. ಈ ಹಸ್ತಪ್ರತಿ ಪುಸ್ತಕ ಆಗೋದು ಯಾವ ರೀತಿ ?" ಆನಂದ ಇನ್ನೊಂದು ಪ್ರಶ್ನೆ ಹಾಕಿದ.

ಅಷ್ಟರಲ್ಲಿ ಆನಂದನ ತಾಯಿ ಕಾಫಿ ತಂದರು. ರಾಮಣ್ಣ ಮಗನಿಗೆ ಹೇಳಿದರು : "ಆನಂದ, ಈ ಹೊತ್ತಿಗೆ ಇಷ್ಟು ಸಾಕು, ಬಿಡು. ಒಂದು ದಿನ ಪಾಸು ಮಾಮನೊಡನೆ ನೀನು ಮುದ್ರಣಾಲಯಕ್ಕೆ ಹೋಗುವಿಯಂತೆ. ನೀನೆ ಕಣ್ಣಾರೆ ನೋಡಬಹುದು." ಆನಂದ ಮನಸ್ಸಿಲ್ಲದೆ ತಲೆಯಾಡಿಸಿದ.

ಪಾಸು ಮಾತು ಕೊಟ್ಟರು : "ಆನಂದ, ನಾಳೆ ನಿನಗೆ ರಜೆ ಇದೆ. ಮುದ್ರಣಾಲಯ ನಾಳೆ ಕೆಲಸ ಮಾಡುತ್ತದೆ. ನಾನು ಬಂದು ನಿನ್ನನ್ನು ಕರೆದುಕೊಂಡು ಹೋಗುವೆ. ನೀನೇನೂ ಯೋಚಿಸಬೇಕಾಗಿಲ್ಲ."

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾರನೆಯ ದಿನ ವಾಸು ಆನಂದನನ್ನು ತಮ್ಮ ಕಾರಿನಲ್ಲಿ ಕರೆದುಕೊಂಡು ಹೊರಟರು. ಕಾರು ಬನ್ನೇರುಘಟ್ಟದ ರಸ್ತೆಯತ್ತ ಸಾಗಿ, ಮುದ್ರಣಾಲಯದ ಬಳಿ ಬಂದು ನಿಂತಿತು.

ಆ ಮುದ್ರಣಾಲಯದ ಮಾಲೀಕರಾದ ಚಿಂತಾಮಣಿ ವಾಸುವಿನ ಮಿತ್ರರು. ಆನಂದನನ್ನು ಕರೆತಂದ ವಿಷಯವನ್ನು ವಾಸು ಸೂಕ್ಷ್ಮವಾಗಿ ತಿಳಿಸಿದರು. ಚಿಂತಾಮಣಿ ಅವರು ಉತ್ಸುಕತೆಯಿಂದ ಅವರನ್ನು ಪ್ರೆಸ್ಸಿನೊಳಗೆ ಕರೆದೊಯ್ದರು.

ವಿಶಾಲವಾದ ಸ್ಥಳ. ಅನೇಕ ಮುದ್ರಣಯಂತ್ರಗಳಿದ್ದವು. ಕೆಲಸಗಾರರು ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ಶಿಸ್ತು ಎದ್ದು ಕಾಣುತ್ತಿತ್ತು. ಯಂತ್ರಗಳ ಬಳಿ ಮುದ್ರಿತವಾದ ಕಾಗದದ ರಾಶಿ ಒಂದು ಕಡೆ ಇತ್ತು.

"ನೋಡಪ್ಪ, ಮುದ್ರಣ ಕಲೆ ಅಪಾರವಾಗಿ ಬೆಳೆದಿದೆ. ಕಳೆದ ನಾಲ್ಕೈದು ದಶಕಗಳಲ್ಲಿ ಮುದ್ರಣದಲ್ಲಿ ಆಗಿರುವಷ್ಟು ತಾಂತ್ರಿಕ ಪ್ರಗತಿ ಕಳೆದ ನಾಲ್ಕು ಶತಮಾನಗಳಲ್ಲಿ ಆಗಿರಲಿಲ್ಲ. ಅಷ್ಟೊಂದು ಉನ್ನತಿಯಾಗಿದೆ ಈ ಕಲೆ. ಮುದ್ರಣ ಎಂದರೆ "ಕಪ್ಪು ಬಿಳುಪು" ಗಳ ಮಿಶ್ರಣ ಎನ್ನುವ ಕಾಲ ಇತ್ತು. ಈಗ ಹಾಗಿಲ್ಲ. ಹಸ್ತಪ್ರತೀನ ಮುದ್ರಣಾಲಯದವರಿಗೆ ತಲುಪಿಸಿ ಬಿಟ್ಟರೆ ಸಾಲದು. ಪ್ರತಿ ಹಂತದಲ್ಲೂ ಆಸಕ್ತಿಯಿಂದ ಎಚ್ಚರಿಕೆ ವಹಿಸಬೇಕಾಗುತ್ತದೆ. ಹೇಗೆ ಒಂದು ಕಲ್ಲಿಗೆ ಅನೇಕ ಪೆಟ್ಟು ಬಿದ್ದು ಸುಂದರ ಕಲಾಕೃತಿಯೊಂದು ನಿರ್ವರ್ಣವಾಗುತ್ತದೋ ಹಾಗೆ ಅನೇಕರ ಕುಶಲ ಕೆಲಸದ ಪರಿಣಾಮವಾಗಿ ಸುಂದರ ಪುಸ್ತಕವೊಂದು ಮೂಡಿಬರುತ್ತದೆ. ಪುಸ್ತಕ ಮುದ್ರಿತವಾಗುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲ ವಿವರಗಳನ್ನು ನಾನು ಹೇಳುವ ಗೋಜಿಗೆ ಹೋಗೋದಿಲ್ಲ," ಎಂದು ಮಾತು ಪ್ರಾರಂಭಿಸಿ ಚಿಂತಾಮಣಿ ಅವರು ಮೊದಲು ಮೊಳೆ ಜೋಡಿಸುವ ವಿಭಾಗಕ್ಕೆ ಹೋದರು.

"ಮೊಳೆ ಜೋಡಣೆಯನ್ನು ಕೈನಿಂದ ಮಾಡುತ್ತಾರೆ, ಯಂತ್ರ ಬಳಸಿ ಮಾಡುತ್ತಾರೆ, ಮೊನೋಟೈಪ್. ಲಿನೋಟೈಪ್ ಯಂತ್ರಗಳನ್ನು ಈ ಕಾರ್ಯದಲ್ಲಿ ಬಳಸುತ್ತಾರೆ. ಈಗ ನೋಡುತ್ತಿದ್ದೀಯಲ್ಲ ಈ ಕೇಸು. ಇದರಲ್ಲಿ ಅಕ್ಷರ ಮಾಲೆಯ ಎಲ್ಲ ಅಕ್ಷರಗಳಿವೆ. ಇದನ್ನು ಒಂದೊಂದಾಗಿ ತೆಗೆದುಕೊಂಡು ಈತ ಮೊಳೆ ಜೋಡಿಸುತ್ತಾನೆ.



Sri Vidyabharati Book Centre, Sringeri

CC-O. In Public Domain. Digitized by eGangotri

ಆಮೇಲೆ ತಾನು ಮೊಳೆ ಜೋಡಿಸಿದ್ದನ್ನು ಗ್ಯಾಲಿಯಲ್ಲಿಟ್ಟು ಕರಡಚ್ಚು ತೆಗೆದುಕೊಡುತ್ತಾನೆ. ಆ ಕರಡಚ್ಚನ್ನು ಪಸ್ತಪ್ರತಿಯೊಡನೆ ಹೋಲಿಸಿ ನೋಡುವುದು ಆವಶ್ಯಕ. ಇಲ್ಲದಿದ್ದರೆ ಬೇಕಾದಷ್ಟು ತಪ್ಪುಗಳು ಉಳಿದುಹೋಗುತ್ತವೆ. ಆದ್ದರಿಂದ ಕರಡಚ್ಚು ಒದುವುದು ಬಹಳ ಮುಖ್ಯ."

"ಈ ಸಂದರ್ಭದಲ್ಲಿ ಏನು ಬೇಕಾದರೂ ವ್ಯತ್ಯಾಸ ಮಾಡಬಹುದೇನು?" ಎಂದು ಮೆಲ್ಲಗೆ ಕೇಳಿದ ಆನಂದ.

"ಅಲ್ಪ ಸ್ವಲ್ಪ ಮಾರ್ಪಾಡು ಮಾಡಬಹುದು. ಆದರೆ ಅದೂ ಸರಿಯಲ್ಲ. ಈ ರೀತಿ ಕರಡಚ್ಚಿನಲ್ಲಿ ಮಾರ್ಪಾಟು ಮಾಡುತ್ತಾ ಹೋದರೆ, ಕೆಲಸ ಜಾಸ್ತಿಯಾಗುತ್ತದೆ. ಹೀಗಾಗಿ ಪುಸ್ತಕ ಮುದ್ರಣದ ವೆಚ್ಚ ಸಹ ಅಧಿಕವಾಗುತ್ತದೆ."

"ಕರಡಚ್ಚುಗಾರರು ಹೀಗೆ ಈ ಕೆಲಸ ನಿರ್ವಸಿಸುತ್ತಾರೆ?" ಆನಂದ ಕೇಳಿದ.

"ನಾನು ಮೊದಲೇ ಹೇಳಿದೆನಲ್ಲಾ. ಮೊದಲು ಗ್ಯಾಲಿ. ನಂತರ ಪುಟದ ಕರಡಚ್ಚನ್ನು ಅವರು ಓದುತ್ತಾರೆ. ತಪ್ಪನ್ನು ತಿದ್ದುತ್ತಾರೆ. ಈ ರೀತಿ ಅವರು ಒಳ್ಳೆಯ ಪುಸ್ತಕ ನಿರ್ಮಾಣ ಕಾರ್ಯದಲ್ಲಿ ನೆರವಾಗುತ್ತಾರೆ. ಅವರು ಎಷ್ಟು ಚೆನ್ನಾಗಿ ಮೂಲ ಹಸ್ತಪ್ರತಿಯೊಡನೆ ಹೋಲಿಸಿ ಕರಡಚ್ಚನ್ನು ತಿದ್ದಿದರೂ ಕೆಲವೊಮ್ಮೆ ಕಣ್ಣು ತಪ್ಪಿಸಿಕೊಂಡು ಕೆಲವು ತಪ್ಪುಗಳು ಹಾಗೆಯೇ ಉಳಿದುಹೋಗುವುದು ಉಂಟು. ಅದನ್ನೇ ನಾವು 'ಮುದ್ರಣ ರಾಕ್ಷಸನ ಹಾವಳಿ' ಎನ್ನುವುದು.

ಕರಡಚ್ಚನ್ನು ತಿದ್ದುವಾಗ ಎಲ್ಲರೂ ನಿರ್ದಿಷ್ಟವಾದ ಚಿಹ್ನೆಗಳನ್ನೇ ಬಳಸುತ್ತಾರೆ. ನಿವು ಅಂತರರಾಷ್ಟ್ರೀಯ ಮುದ್ರಣ ಸಂಘದಿಂದ ಮಾನ್ಯತೆ ಪಡೆದಂತಹವು" ಎಂದು ಹೇಳಿ ಅಲ್ಲಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಡಚ್ಚುಗಾರರ ಮೇಜಿನ ಬಳಿಗೆ ಆನಂದನನ್ನು ಚಿಂತಾಮಣಿ ಕರೆದೊಯ್ದರು. ಅಲ್ಲಿಯೇ ಇದ್ದ ಕರಡಚ್ಚು ತಿದ್ದುವಿಕೆ ವಿಧಾನದ ಪ್ರತಿಯೊಂದನ್ನು ಆನಂದ ನೋಡಿದ.

"ಕರಡಚ್ಚನ್ನು ಲೇಖಕರು ನೋಡಿ ಒಪ್ಪಿಗೆ ಕೊಟ್ಟ ನಂತರ ಅದನ್ನು ಮುದ್ರಿಸಲಾಗುತ್ತದೆ. ಲೆಟರ್‌ಪ್ರೆಸ್, ಆಫ್‌ಸೆಟ್,



ಗ್ರೆವೂರ್ ಮೊದಲಾದ ಅನೇಕ ಮುದ್ರಣ ವಿಧಾನಗಳಿವೆ. ಇವುಗಳಿಗೆ ತಕ್ಕಂತೆ ಮಳೆ ಜೋಡಣೆಯಲ್ಲೂ ವ್ಯತ್ಯಾಸಗಳು ಇರುತ್ತವೆ" ಎಂದರು ಚಿಂತಾಮಣಿ.

ಮುದ್ರಣ ಯಂತ್ರದಲ್ಲಿ ಫಾರಂ ಒಂದು ಬಣ್ಣದಲ್ಲಿ ಮುದ್ರಿತವಾಗುತ್ತಿತ್ತು. ಅದನ್ನು ಕಂಡ ಆನಂದ "ಈ ಚಿತ್ರ ಹೇಗೆ ಆಗಿದೆ?" ಎಂದು ಕೇಳಿದ.

"ಆನಂದ, ಪುಸ್ತಕ ಕಲಾತ್ಮಕವಾಗಿ ಇರಬೇಕು. ನಮ್ಮ ವ್ಯಕ್ತಿತ್ವದಂತೇ ಅದಕ್ಕೂ ಒಂದು ಬಗೆಯ ಸೊಗಸಿರುತ್ತದೆ. ಅದೂ ಅಂದವಾಗಿ ಕಂಡರೇ ಚೆನ್ನ. ಈ ಕೆಲಸವನ್ನು ನಿರ್ವಹಿಸುವವರು ಕಲಾವಿದರು," ಎಂದರು ಚಿಂತಾಮಣಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರಡು ತಿದ್ದುವಿಕೆ ವಿಧಾನ

ತ.ಮೊ ನಮ್ಮ ಚಿಂತನೆಗಳಿಗೆ ಚಿಂತನೆಗಳಿಗೆ. ರೂಪ ೧೭
೨ ಕೊಡುವ ವಸ್ತುವೆಂದರೆ ಪುಸ್ತಕ ಇದು
೧೪ ಬಳಿಯ ತಿಳುವಳಿಕೆಯನ್ನು ಮಾತ್ರವಲ್ಲದೆ ೧೦
ಮನೋರಂಜನೆಯನ್ನು ಸಹ ನೀಡುತ್ತದೆ ೧೦
ಬಿಡಿ ಪುಸ್ತಕ ಸಂಸ್ಕೃತಿ-ಪ್ರಸಾರ ವಾಹಕವಾಗಿ ಶತ
ಶತಮಾನಗಳಿಂದ ಸಮಾಜದ ಪ್ರಗತಿಗೆ ಮೊ
ನೆರವಾಗಿದೆ. ವೈದ್ಯಕೀಯ. ವಿಜ್ಞಾನ. ತಂತ್ರ ೨
೧೦ ಜ್ಞಾನ ಮುಖಾದ ಎಲ್ಲ ಕ್ಷೇತ್ರಗಳ ಉನ್ನತಿ ೭೧
೧೧ ಯಲ್ಲಿ ಪುಸ್ತಕ ಪಾತ್ರ ಅಪಾರ. ಪುಸ್ತಕದ
೧೪ ಆಕಾರ ಗ ಬದಲಾಗಿರಬಹುದು. ಆದರೆ
೧೫ ಅದರ ಸತ್ವ ಸದಾ ಆಯಾ ಕಾಲದ ಪ್ರತಿ
ಭೆಯನ್ನು ಆವಲಂಬಿಸಿರುತ್ತದೆ. ೨೨

ಕೆಲವು ಚಿಹ್ನೆಗಳು

೧	ಆನಗತ್ಯವಾದುದನ್ನು ತೆಗೆದು ಹಾಕಲು	೭	ತಿರುಗುಮುರುಗಾಗಿರುವ ಅಕ್ಷರ ಸರಿಪಡಿಸುವಾಗ
ಬಿಡಿ	ಹಾಗೆಯೇ ಇರಲಿ	ಸಮ	ಸಮಾನವಾಗಿ ಸ್ಥಳ ಬಿಡಿ
೧	ಒಟ್ಟುಗೂಡಿಸಿ	೩	ಪ್ಯಾರಾ ಬೇಕಾದರೆ
೩	ಒಂದು ಅಕ್ಷರವನ್ನು ತೆಗೆದು ಹಾಕಿ, ಪದವನ್ನು ಒಂದಾಗಿ ಕೂಡಿಸಬೇಕಾದರೆ	⊙	ಪೂರ್ಣವಿರಾಮ
		x	ಒಡೆದ ಅಕ್ಷರಕ್ಕೆ ಬದಲಾಗಿ
೭	ತಿರುಪು ಸಮಾನವಾಗಿ ಇರದಿದ್ದರೆ	ತ.ಮೊ.	ತಪ್ಪು ಮೊಳೆ
		=	ನೇರವಾಗಿಸಿ
ಸ	ತಿರುವು ಬಿಡಬೇಕಾದರೆ	‖	ಸಾಲು ಸರಿ ಮಾಡಿ
೧೧	ವರ್ಗಾಯಿಸಿ	೬	ಬಲಕ್ಕೆ ತೆಗೆದುಕೊಳ್ಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

"ಕಲಾವಿದರು ಏನು ಮಾಡುತ್ತಾರೆ?" ಎಂದ ಆನಂದ.

"ಪುಸ್ತಕಗಳಿಗೆ ಬೇಕಾದ ಚಿತ್ರಗಳನ್ನು ಅವರು ಬರೆದು ಕೊಡುತ್ತಾರೆ. ಹಾಗೆಯೇ ಪುಸ್ತಕದ ಮೇಲೆ ಹೊದಿಕೆಯನ್ನು (ರಕ್ಷಾಪುಟ) ಅವರು ಒದಗಿಸುತ್ತಾರೆ. ಈ ಚಿತ್ರಗಳನ್ನು ಪಡಿಯಚ್ಚು ಮಾಡಿ ಮುದ್ರಣ ಸಮಯದಲ್ಲಿ ಬಳಸಿಕೊಳ್ಳುತ್ತಾರೆ. ಈಗ ನೋಡಿದೆಯಲ್ಲಾ, ಅದನ್ನೇ ಪಡಿಯಚ್ಚು ಎನ್ನುವುದು. ರೇಖಾ ಚಿತ್ರಗಳು, ಛಾಪ ಚಿತ್ರಗಳು ಮೊದಲಾದುವನ್ನು ಪಡಿಯಚ್ಚು ಮಾಡಿ ಉಪಯೋಗಿಸುತ್ತಾರೆ."

"ಬಣ್ಣದ ಪುಸ್ತಕಗಳು ಹೇಗೆ ಆಗುತ್ತವೆ?" ಆನಂದ ಕುತೂಹಲದಿಂದ ಕೇಳಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ದೇಶದಲ್ಲಿರುವ ಹಲವಾರು ಮುದ್ರಣ ಯಂತ್ರಗಳಲ್ಲಿ ಒಂದು ಸಲಕ್ಕೆ ಒಂದೇ ಬಣ್ಣವನ್ನು ನಾವು ಮುದ್ರಿಸಬಹುದು. ಹಲವಾರು ಯಂತ್ರಗಳು ಒಂದಕ್ಕಿಂತ ಹೆಚ್ಚು ಬಣ್ಣಗಳ ಮುದ್ರಣ ಕಾರ್ಯವನ್ನು ಮಾಡುತ್ತವೆ. ಅಂತಹ ಯಂತ್ರಗಳ ಬೆಲೆ ದುಬಾರಿಯಾಗಿರುವುದು" ಎಂದು ಚಿಂತಾಮಣಿ ವಿವರಿಸಿದರು.

ಹೆಚ್ಚು ಸಮಯ ಇಲ್ಲದಿದ್ದುದರಿಂದ ಚಿಂತಾಮಣಿ ಅವರು ಆನಂದನನ್ನು ಪುಸ್ತಕಗಳ ರಟ್ಟು ಕಟ್ಟುವ ವಿಭಾಗ, ಪಡಿಯಚ್ಚು ವಿಭಾಗ ಹಾಗೂ ಇನ್ನಿತರ ವಿಭಾಗಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಕಾರ್ಯಗಳನ್ನು ವಿವರಿಸಿದರು.

ರಟ್ಟು ಕಟ್ಟುವ ವಿಭಾಗದಲ್ಲಿ ಇದ್ದ ಅನೇಕ ಕತ್ತರಿಸುವ, ಮಡಚುವ, ಹೊಲಿಯುವ ಯಂತ್ರಗಳನ್ನು ಕಂಡು ಆನಂದ ತುಂಬ ಸಂತೋಷಪಟ್ಟ.

ಉಗ್ರಾಣದಲ್ಲಿ ನಾನಾ ಬಗೆಯ ಆಕಾರದ, ತೂಕದ ಕಾಗದ ಹಾಗೂ ಬೋರ್ಡುಗಳನ್ನು ಅವನು ಕಂಡ. ಎಂತಹ ಹೊಳಪಿನ ಕಾಗದ! ಎಂದು ಉದ್ಗಾರವೆತ್ತಿದ.

ಮುದ್ರಣಾಲಯದಿಂದ ಹೊರಬರುವಾಗ ಆನಂದ ಚಿಂತಾಮಣಿಯವರಿಗೆ ವಂದನೆಗಳನ್ನು ತಿಳಿಸಿದ.

ದಾರಿಯಲ್ಲಿ ಆನಂದ ಮತ್ತೆ ಕೇಳಿದ: "ಮಾಸು ಮಾಮ, ಪುಸ್ತಕದ ಬೆಲೆಯನ್ನು ಹೇಗೆ ನಿರ್ಧರಿಸುತ್ತಾರೆ?"

"ಮುದ್ರಣದ ವೆಚ್ಚ, ಲೇಖಕರ ಹಾಗೂ ಕಲಾವಿದರ ಸಂಭಾವನೆ, ಚಿತ್ರ, ಪಡಿಯಚ್ಚು ಕಾಗದ ಮತ್ತಿತರ ವಸ್ತುಗಳ ವೆಚ್ಚ, ಮಾರಾಟಕ್ಕೆ ತಗಲುವ ಖರ್ಚು, ಸಿಬ್ಬಂದಿ ವೆಚ್ಚ ಮುಂತಾದುವನ್ನು ಗಮನಿಸಿ, ಬೆಲೆಯನ್ನು ನಿರ್ಧರಿಸುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಮಾನ್ಯ ಪದ್ಧತಿ. ಇದು ಆಯಾ ಪ್ರಕಾಶಕರನ್ನು ಅವಲಂಬಿಸಿರುವ ವಿಷಯ" ಎಂದರು ವಾಸು.

"ಲೇಖಕರಿಗೆ ಏನಾದರೂ ಸಂಭಾವನೆ ಕೊಡುತ್ತಾರೇನು?' ಎಂದು ಕೇಳಿದ ಆನಂದ.

"ಹೌದು, ಪ್ರಕಾಶರು ಲೇಖಕರಿಗೆ ಗೌರವ ಧನ ನೀಡುತ್ತಾರೆ. ಅದು ಸಾಮಾನ್ಯವಾಗಿ ಪುಸ್ತಕದ ಮುಖಬೆಲೆಯ ಶೇ. ೧೦ ರಿಂದ ೧೫ರಷ್ಟಿರುತ್ತದೆ. ಆಗ ಆ ಮುದ್ರಣದ ಸ್ವಾಮ್ಯವನ್ನು ಪ್ರಕಾಶನಿಗೆ ಅವರು ಒಪ್ಪಿಸುತ್ತಾರೆ."

"ಅಂದರೆ ಪುಸ್ತಕ ಬರೆದ ಲೇಖಕನಿಗೆ ಸಂಭಾವನೆ ಅಷ್ಟೇನಾ?"

"ತಮ್ಮ ಪುಸ್ತಕ ತಾವೇ ಮುದ್ರಿಸಿಕೊಳ್ಳುವ ಶಕ್ತಿ ಇರುವ ಲೇಖಕರು ಸ್ವತಃ ಪ್ರಕಾಶಕರಾಗುತ್ತಾರೆ. ಆಗ ಮಾರಾಟದ ಹೊಣೆಯನ್ನೂ ಅವರೇ ವಹಿಸಿಕೊಂಡು, ವ್ಯವಸ್ಥೆ ಮಾಡಬೇಕಾಗುತ್ತದೆ.

ಯಾರಾದರೂ ಆ ಕೃತಿಯನ್ನು ಅನುವಾದ ಮಾಡಿಸಿ, ಪ್ರಕಟಿಸಲು ಮುಂದೆ ಬಂದರೆಂದುಕೋ; ಇಲ್ಲವೆ ಚಿತ್ರೀಕರಣ ಅಥವಾ ಟಿ.ವಿ. ಯಲ್ಲಿ ಪ್ರದರ್ಶಿಸಬಯಸುತ್ತಾರೆ ಎಂದುಕೋ. ಆಗ ಲೇಖಕರ ಅಥವಾ ಪ್ರಕಾಶಕರ ಅಪ್ಪಣೆ ಪಡೆಯುವುದು ಅನಿವಾರ್ಯವಾಗುತ್ತದೆ. ಅವರ ಅನುಮತಿ ಪಡೆಯಲು ಸಂಭಾವನೆ ಸಹ ಕೊಡಬೇಕಾಗುತ್ತೆ."

"ಮಾರಾಟವಾಗದಿದ್ದರೆ ಪುಸ್ತಕಗಳು ಉಗ್ರಾಣದಲ್ಲೇ ಕೊಳೆಯುತ್ತವೆಯಲ್ಲವೇ ವಾಸು ಮಾಮಾ ?" ಎಂದ ಆನಂದ.

"ನಿಜ. ಪುಸ್ತಕವನ್ನು ತಯಾರಿಸಿದರೆ ಸಾಲದು; ಅದು ಮಾರಾಟ ಆಗಬೇಕು. ಮಾರಾಟ ಕೇಂದ್ರಗಳ ಒಂದು ಜಾಲವೇ ನಿರ್ಮಾಣವಾಗಬೇಕು. ಆಗ ಮಾತ್ರ ಪ್ರಕಟಿಸಿದ ಪುಸ್ತಕಗಳು

CC-O. In Public Domain. Digitized by eGangotri

ಓದುಗರ ಕೈಸೇರುತ್ತವೆ. ಪುಸ್ತಕ ಪ್ರಕಟಣೆಗೆ ಹೂಡಿದ ಬಂಡವಾಳ ಹಿಂದಿರುಗಿ ಬರುತ್ತದೆ.

ಅಕ್ಷರತೆ, ವಾಚನಾಭಿರುಚಿ, ಪುಸ್ತಕಕೊಂಡು ಓದುವ ಅಭ್ಯಾಸ ಇವುಗಳಿಂದ ಮಾತ್ರ ಪುಸ್ತಕ ಉದ್ಯಮದ ಭವಿಷ್ಯ ಉಜ್ವಲವಾಗಬಲ್ಲದು. ಇಂದು ಪಾಶ್ಚಾತ್ಯ ದೇಶಗಳಲ್ಲಿ ಪ್ರಕಾಶನ ಆಧುನಿಕ ರೀತಿಯಲ್ಲಿ ನಡೆಯುತ್ತಿದೆ. ಪುಸ್ತಕಗಳ ವಿತರಣೆಗೆ, ಲೆಕ್ಕಾಚಾರಕ್ಕೆ ಕಂಪ್ಯೂಟರ್ ಯಂತ್ರವನ್ನು ಅವರು ಬಳಸುತ್ತಿದ್ದಾರೆ. ಮುಂದಿನ ವರ್ಷ ಪ್ರಕಟವಾಗುವ ಪುಸ್ತಕಗಳ ವಿವರಗಳನ್ನು ಸಹ ಮುಂಚಿತವಾಗಿಯೇ ಪ್ರಚಾರ ಮಾಡುತ್ತಾರೆ. ಪ್ರಕಟಿಸುವ ಪುಸ್ತಕಗಳ ಗುಣಮಟ್ಟವನ್ನೂ ಅವರು ಕಾದಿರಿಸಿರುತ್ತಾರೆ.

ಪ್ರಕಾಶಕರ, ಪುಸ್ತಕ ಮಾರಾಟಗಾರರ ಸಂಘಗಳು ಪ್ರಕಾಶನ ಉದ್ಯಮದ ಪ್ರಗತಿಗಾಗಿ ದುಡಿಯುತ್ತವೆ." ಎಂದರು ವಾಸು.

ಆನಂದ ಹಿಂತಿರುಗಿ ಮನೆಗೆ ಬಂದಾಗ ಅವನ ಮನಸ್ಸು ಸಂತೋಷಭರಿತವಾಗಿತ್ತು. ವಾಸು ಮಾಮಾ ಮತ್ತು ಚಿಂತಾಮಣಿಯವರು ಹೇಳಿದ್ದನ್ನು ನೆನಪಿಸಿಕೊಂಡ. ಈ ಉದ್ಯಮದ ವ್ಯಾಪ್ತಿ ಅವನನ್ನು ದಂಗುಬಡಿಸಿತ್ತು. ಪುಸ್ತಕಪ್ರೇಮಿಯಾಗುವ ಬಯಕೆ ಅವನ ಎವೆಯಲ್ಲಿ ಚಿಮ್ಮಿಬಂತು.

Sri Vidyabharathi Book Centre, Sringeri